ರಾಜ್ಯದ ನಗರಸಭೆ ಮತ್ತು ಪುರಸಭೆಗಳಿಗೆ ಪೌರ ಕಾರ್ಮಿಕರ ಕೊರತೆ.

3413 (4401) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ನಗರಸಭೆ ಮತ್ತು ಪುರಸಭೆಗಳಿಗೆ ಪೌರ ಕಾರ್ಮಿಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪೌರ ಕಾರ್ಮಿಕರ ಕೊರತೆಯಿಂದ ನಗರ ಪ್ರದೇಶಗಳ ಶುಚಿತ್ವಗೊಳಿಸುವಲ್ಲಿ ಪುರಸಭೆಗಳು ಮತ್ತು ನಗರಸಭೆಗಳು ಗಂಭೀರ ಪರಿಣಾಮ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಈ) ಕೆಲವು ಆರ್ಥಿಕವಾಗಿ ಸದೃಢವಾಗಿರುವ ಪುರಸಭೆ ಮತ್ತು ನಗರಸಭೆಗಳಿಗೆ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಸರ್ಕಾರ ಅನುಮತಿ ನೀಡಿದೆಯೇ? ಹಾಗಿದ್ದಲ್ಲಿ, ಅವುಗಳಿಗೆ ವಿಶೇಷ ಗ್ರಾಂಟ್ ಹಣ ಬಿಡುಗಡೆಗೊಳಿಸಲಾಗಿದೆಯೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ಬಂದಿದೆ.

ಆ) ಬಂದಿದೆ.

ಇ) ದೇಶದ ಬಹುತೇಕ ಎಲ್ಲಾ ಕಡೆಗಳಲ್ಲಿ ಕಸ ವಿಲೇವಾರಿ ಹಾಗೂ ನೈರ್ಮಲ್ಯ ಕಾರ್ಯವನ್ನು ಖಾಸಗಿಕರಣ ಗೊಳಿಸುವ ಪ್ರಯತ್ನ ನಡೆಯುತ್ತಿರುವ ಹಿನ್ನಲೆಯಲ್ಲಿ, ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಕಸ ವಿಲೇವಾರಿ ಹಾಗೂ ನೈರ್ಮಲ್ಯ ನಿರ್ವಹಣೆ ಕಾರ್ಯವನ್ನು ಖಾಸಗೀ ಸಂಸ್ಥೆಗಳಿಂದ ಟೆಂಡರ್ ಕರೆದು ಸ್ಪರ್ಧಾತ್ಮಕ ನಿಬಂಧನೆಗಳ ಮೇಲೆ ವಹಿಸಬೇಕೆಂಬ ನಿಲುವನ್ನು ಹೊಂದಿದೆ. ಈ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ಸೂಚನೆಗಳನ್ನು ನೀಡಲಾಗಿದೆ.

ಈ) ಇಲ್ಲ.

ಕೈಮಗ್ಗ ಬಟ್ಟೆಗಳಿಗೆ ನೀಡಬೇಕಾಗಿರುವ ಮಾರುಕಟ್ಟೆ ಸಹಾಯಧನ.

3415(4400) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ೧೯೯೮-೯೯ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಕೈಮಗ್ಗ ಬಟ್ಟೆಗಳಿಗೆ ವಿಶೇಷ ರಿಯಾಯಿತಿಯಾಗಿ ಶೇಕಡ ೧೦ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ನೀಡುವುದಾಗಿ ಘೋಷಿಸಿರುವುದು ನಿಜವೇ? ನಿಜವಾದಲ್ಲಿ, ಈ ಹಣವನ್ನು ಈವರೆಗೆ ಬಿಡುಗಡೆ ಮಾಡದೇ ಇರುವುದು ಸತ್ಯವೇ? ಹಾಗಿದ್ದಲ್ಲಿ, ಈ ಬಿಡುಗಡೆಯ ವಿಳಂಬಕ್ಕೆ ಕಾರಣಗಳೇನು? ಎಂದು ಬಿಡುಗಡೆಮಾಡಲಾಗುವುದು.

ಅ) ೧೯೯೭-೯೮, ೧೯೯೮-೯೯, ೧೯೯೯-೨೦೦೦ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೇಕಾರರ ಸಂಘಗಳಿಂದ ನೇಕಾರರ ಸಂಘಗಳಿಗೆ ಸಹಾಯದನದ ರೂಪದಲ್ಲಿ ಹಣ ಬಿಡುಗಡೆಯಾಗಬೇಕಾಗಿರುವ ಜಿಲ್ಲೆಗಳು ಯಾವುವು?

ಆ) ಈ ಹಣವನ್ನು ಸರ್ಕಾರ ಎಂದು ಬಿಡುಗಡೆ ಮಾಡುವುದು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ರಾಜ್ಯ ಸರ್ಕಾರವು ೧೯೯೮-೯೯ನೇ ಸಾಲಿಗೆ ಕೈಮಗ್ಗ ಬಟ್ಟೆ ಮಾರಾಟವನ್ನು ವೃದ್ಧಿಗೊಳಿಸಲು ಶೇಕಡ ೨೦ ವಿಶೇಷ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯನ್ನು ಮಂಜೂರು ಮಾಡಿರುತ್ತದೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಈಗಾಗಲೇ ಈ ಯೋಜನೆಯಡಿ ರೂ. ೪೩.೭೦ ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ರಾಜ್ಯದ ಸಹಕಾರ ಸಂಘಗಳಿಗೆ ರೂ.೧೨೮.೦೦ ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ಪರಿಶೀಲನೆಯಲ್ಲಿರುತ್ತದೆ.

ಆ) ೧೯೯೭-೯೮, ೧೯೯೮-೯೯, ೧೯೯೯-೨೦೦೦ನೇ ಸಾಲಿಗೆ ಕೇಂದ್ರ ಸರ್ಕಾರವು ನೇಕಾರ ಸಹಕಾರ ಸಂಘಗಳಿಗೆ ಸಹಾಯಧನ ರೂಪದಲ್ಲಿ ಬಿಡುಗಡೆಯಾಗಬೇಕಾಗಿರುವ ಜಿಲ್ಲೆಗಳು ಈ ಕೆಳಕಂಡಂತಿವೆ.

೧೯೯೭-೯೮	೧೯೯೮-೯೯	೧೯೯೯-೨೦೦೦
೧. ಉಡುಪಿ	೧. ಬೆಂಗಳೂರು ನಗರ	೧. ಬೆಂಗಳೂರು ನಗರ
	೨. ಉಡುಪಿ	೨. ಉಡುಪಿ
	೩. ದಕ್ಷಿಣ ಕನ್ನಡ	೩. ದಕ್ಷಿಣ ಕನ್ನಡ
	೪. ಗುಲ್ಬರ್ಗಾ	೪. ಗುಲ್ಬರ್ಗಾ
	೫. ರಾಯಚೂರು	೫. ರಾಯಚೂರು
	೬. ಬಳ್ಳಾರಿ	೬. ಧಾರವಾಡ
	೭. ಚಿತ್ರದುರ್ಗ	೭. ಚಿಕ್ಕಮಗಳೂರು
	೮. ಬಾಗಲಕೋಟೆ	೮. ಬಳ್ಳಾರಿ
	೯. ಕೆಹೆಚ್‌ಡಿಸಿ	೯. ಚಿತ್ರದುರ್ಗ
		೧೦. ಬಾಗಲಕೊಟೆ
		೧೧. ಕೆ.ಹೆಚ್.ಡಿ.ಸಿ.

ಇ) ಕೇಂದ್ರದ ಪಾಲಿನ ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ಬಿಡುಗಡೆ ಮಾಡುವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದು ಕೆಲವು ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಸಹಕಾರ ಸಂಘಗಳಿಗೆ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ರಾಜ್ಯ ಸರ್ಕಾರದ ಹಾಲಿನ ಹಣ ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.